(6) ಶಾಸನ ರಚನಾ ಕಾರ್ಯಕಲಾಪಗಳು

ವಿಷಯ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (2ನೇ ತಿದ್ದುಪಡಿ) ವಿಧೇಯಕ 1997.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997-98ನೇ ಸಾಲಿನಲ್ಲಿ ಮೋಟಾರು ವಾಹನ ತೆರಿಗೆಗೆ ಸಂಬಂಧಪಟ್ಟ ಹಾಗೆ ಲೈಫ್ ಟೈಮ್ ಟ್ಯಾಕ್ಸನ್ನು ಏನು ಹಾಕಿದ್ದೇವೆ ಅದನ್ನು ಮಾನ್ಯ ಹಣಕಾಸಿನ ಸಚಿವರು ಬಜೆಟ್‌ನಲ್ಲಿ ಮಂಡನೆ ಮಾಡಿದಾಗ ಒಂದು ರೇಟ್‌ನ್ನು ಫಿಕ್ಸ್ ಮಾಡಿದ್ದರು. ಅದರಲ್ಲಿ ಸೆಂಟ್ರಲ್ ಗೌರ್ನ್‌ಮೆಂಟ್ ಎಂಪ್ಲಾಯೀಸ್ ಮತ್ತು ಡಿಫೆನ್ಸ್ ಎಂಪ್ಲಾಯೀಸ್ ಏನು ಮಾಡುತ್ತಾರೆಂದರೆ ವೆಹಿಕಲ್ಸ್‌ನ್ನು ಬೇರೆ ರಾಜ್ಯಗಳಿಗೆ ಟೆಂಪರರಿಯಾಗಿ ಟ್ರಾನ್ಸ್‌ಫರ್ ಮಾಡುತ್ತಾರೆ. ಅದರಿಂದ, ಅವರಿಗೆ ಎಕ್ಸಂಪ್‌ಷನ್ ಕೊಡಬೇಕು ಎನ್ನುವ ದೃಷ್ಟಿಯಿಂದ ಒಂದು ಆರ್ಡಿನೆನ್ಸ್‌ನ್ನು ಮಾಡಿದ್ದೇವೆ. ಆ ಆರ್ಡಿನೆನ್ಸ್‌ನ್ನು ರಿಪ್ಲೇಸ್ ಮಾಡತಕ್ಕಂಥ ಬಿಲ್ ಇದು ಆಗಿರುತ್ತದೆ. ದಯಮಾಡಿ ಸರ್ವಾನುಮತದಿಂದ ಎಲ್ಲರೂ ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡಿ ಪುನಃ ಸಾಯಂಕಾಲ 4 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲಿದ್ದೇವೆ.

(ಸದನವು 2-40 ಗಂಟೆಗೆ ಮುಂದೂಡಿ ಪುನಃ ಸಾಯಂಕಾಲ 4-30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆ 4-40ಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಮಾನ್ಯ ವಸಂತ ಬಂಗೇರ ಅವರೇ ಪೆಟ್ರೋಲಿಯಂ ಬಗ್ಗೆ ಸರಕಾರ ಹೇಳಿಕೆ

ಮಾಡಬೇಕಾಗಿತ್ತು. ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕರೆಸಿ ಬಂದು ಮಾಡಲಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಕಳೆದ 20 ದಿವಸಗಳಿಂದ ತುಮಕೂರು ಜಿಲ್ಲೆಯಲ್ಲಿ ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಕಷ್ಟದ ಬಗ್ಗೆ ನಿವೇದನೆ ಮಾಡಿಕೊಳ್ಳುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತಾ ಬಂದಿದ್ದೇವೆ. ಅಂತಿಮವಾಗಿ ನಮ್ಮ ಬ್ರಹ್ಮಾಸ್ತ್ರವಾಗಿ ನಿಲುವಳಿ ಸೂಚನೆಯನ್ನು ಕೂಡ ಕೊಟ್ಟಿದ್ದೇವೆ ನಮ್ಮ ಉದ್ದೇಶ ಅದು ಇರಲಿಲ್ಲ. ಹೇಗಾದರೂ ಮಾಡಿ ಸದನದಲ್ಲಿ ತಮ್ಮ ಗಮನಕ್ಕೆ ತಂದು ಸರಕಾರದಿಂದ ನಮ್ಮ ಸಮಸ್ಯೆ ಪರಿಹಾರವಾದರೆ ಸಾಕು.

ಅಧ್ಯಕ್ಷರು: ನಿಮ್ಮ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇಂದು ಆಗುವುದಿಲ್ಲವೆಂದು ಕಾಣುತ್ತದೆ. 8 ನೇ ತಾರೀಖು ಅವಕಾಶ ಕೊಡುತ್ತೇನೆ. ಬೇಕಾದಷ್ಟು ಸಮಯ ಇದೆ.

ಶ್ರೀ ಹೆಚ್.ಎನ್.ಪ್ರಕಾಶ್: ನಮ್ಮಲ್ಲಿ 50 ಕೆ.ಜಿ. ಆಲೂಗಡ್ಡೆ 30 ರೂಪಾಯಿಯಾಗಿ ರೈತರು ಕಂಗಾಲಾಗಿದ್ದಾರೆ. ಮತ್ತು ಎ.ಪಿ.ಎಂ.ಸಿ.ಯವರಿಗೆ ಹಾಗೂ ವರ್ತಕರಿಗೆ ಗಲಾಟೆಯಾಗಿ ಬಹಳ ಗೊಂದಲವಾಗಿದೆ. 400 ಲೋಡ್ ಆಲೂಗೆಡ್ಡೆ ಎ.ಪಿ.ಎಂ.ಸಿ.ಯಲ್ಲಿ ಇದೆ. ಆಲೂಗೆಡ್ಡೆ ಬಗ್ಗೆ ಸರಕಾರವೇನು ಕಳೆದ ವರ್ಷ ಕ್ರಮ ತೆಗೆದುಕೊಂಡರು ಅದೇ ರೀತಿ ಈ ವರ್ಷವೂ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು: ಮಾನ್ಯ ನಾರಾಯಣ್ ಅವರೇ ಆಲೂಗೆಡ್ಡೆಗೆ ಇಂತಹ ತೊಂದರೆ ಬಂದಿದೆಯಲ್ಲ ಏನು ಮಾಡೋಣ. ಅವರು ನನ್ನ ಸ್ನೇಹಿತರು ನನಗೇನಾದರೂ ಸಲಹೆ ಕೊಡುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್.ಪ್ರಕಾಶ್: ಇಡೀ ರೈತರು ಬೆಳೆದಂತಹ ಹಾಸನ ಜಿಲ್ಲೆಯ ಎಲ್ಲಾ ಆಲೂಗೆಡ್ಡೆಯನ್ನು ಕೊಳ್ಳುವುದಕ್ಕೆ ಆಗದೇ ಇದ್ದರೂ ಕೂಡ ಮಾರುಕಟ್ಟೆಯಲ್ಲಿ ಸರಕಾರ ಅದನ್ನು ಕೊಳ್ಳುವಂತಹ ವ್ಯವಸ್ಥೆ ಮಾಡಿದರೆ ಅನುಕೂಲ.

ಅಧ್ಯಕ್ಷರು: ಕೃಷಿ ಸಚಿವರಿಗೆ ಹೇಳಿ ಕಳಿಸುತ್ತೇನೆ. ಗಮನ ಸೆಳೆಯುವ ಸೂಚನೆ ನೀಡಿದಂತಹ ಸದಸ್ಯರು ನಾವು ಬರುವುದಕ್ಕಾಗುವುದಿಲ್ಲ ತೊಂದರೆ ಇದೆ ಎಂದು ಇನ್ನೊಂದು ದಿವಸ ತೆಗೆದುಕೊಳ್ಳೋಣವೆಂದರು ನಾನು ಆಗಲಿ ಎಂದು ಹೇಳಿದೆ.

ಶ್ರೀ ಬಿ.ಬಿ.ಶಿವಕುಮಾರ್: ಮಾನ್ಯ ಪ್ರಕಾಶ್ ಅವರು ಆಲೂಗೆಡ್ಡೆ ಬೆಲೆ ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ನಾನು ಶಾಸಕಾಂಗ ಪಕ್ಷದ ಸಭೆಯಲ್ಲಿ ಸರಕಾರಕ್ಕೆ ಸಲಹೆ ಕೊಟ್ಟಿದ್ದೆ ಸುಮಾರು 50-100 ಕೋಟಿಯನ್ನು ಸರಕಾರ ಸಹಕಾರ ಇಲಾಖೆಯಲ್ಲಿ ಇಟ್ಟು ಈ ಟಮೊಟೋ ಆಲೂಗಡ್ಡೆ ಮತ್ತೊಂದು ಇರಬಹುದು ಅದರಲ್ಲಿ ಬೆಲೆಗಳೇನು

ಏರುಪೇರಾಗುತ್ತವೆ ಅಲ್ಲಿ ಮಾರುಕಟ್ಟೆಯಲ್ಲಿ ಒಂದು ಬೆಲೆಯನ್ನು ಸ್ಥಿರತೆ ಇಡಲಿಕ್ಕೋಸ್ಕರ ಅದಕ್ಕೆ ಈ ಹಣ ಕೊಡುವಂತಹ ವ್ಯವಸ್ಥೆ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಇವೆಲ್ಲಾ ಬಹಳ ಸೋಬರ್ ಮೆತೆಡ್ಸ್ ಆಯಿತು ಸರಕಾರ ಮಾಡಬೇಕಾಗಿರುವ ಕೆಲಸ ಮಾಡಿದರೆ ರೇಟ್ ತನ್ನಷ್ಟಕ್ಕೆ ತಾನೇ ಇಳಿಯುತ್ತದೆ. ವ್ಯಾಪಾರಸ್ಥರಿಗೆ ಒಂದೇ ಸಲ ಬೆಳೆ ಬಂದಿದೆ ಎಂದು ತಿಳಿದಿರುತ್ತದೆ ಬೆಳೆ ಬಂದಿದೆ ಸ್ಟಾಕ್ ಇಟ್ಟುಕೊಳ್ಳಲಾಗುವುದಿಲ್ಲವೆಂದು ಅವರಿಗೆ ಗೊತ್ತು. ಅವರು ಕಡಿಮೆ ಜನತಾನೆ ಮಾತನಾಡಿಕೊಂಡು ಇದಕ್ಕಿಂತ ಜಾಸ್ತಿ ಕೊಡುವುದು ಬೇಡ ಕಂಗಾಲಾಗಿ ನಮಗೇ ತಂದು ಕೊಡುತ್ತಾರೆಂದು ಲೆಕ್ಕ ಹಾಕಿರುತ್ತಾರೆ. ಮಾನ್ಯ ಅಶ್ವತ್ ನಾರಾಯಣ ರೆಡ್ಡಿಯವರು ಎ.ಪಿ.ಎಂ.ಸಿ. ಅಧ್ಯಕ್ಷರಾಗಿ ಕೆಲಸ ಮಾಡಿದ್ದರು ಅವರನ್ನು ಕೇಳಿ. ವ್ಯಾಪಾರಸ್ಥರ ಕೆಲಸವೇ ಅದು. ಸರಕಾರ ಅದಕ್ಕೆ ಬೇರೆ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸಬೇಕು. ಬೇರೆ ವಿಧಾನಗಳು ಇರುತ್ತವೆ ಅವುಗಳನ್ನು ಅವರಿಗೆ ಪರಿಚಯ ಮಾಡಿಸಿದರೆ ತಕ್ಷಣ ತನ್ನಷ್ಟಕ್ಕೆ ತಾನೇ ರೇಟುಗಳು ಮೇಲಕ್ಕೇರುತ್ತವೆ. ಸರಕಾರದ ಕೈಯ್ಯಲ್ಲಿ ಆ ಕೆಲಸ ಮಾಡಿಸಿ. ಅವರೇ ಬೆಲೆ ಜಾಸ್ತಿ ಮಾಡುತ್ತೇವೆಂದು ನಿಮ್ಮ ಹತ್ತಿರಕ್ಕೆ ಓಡಿ ಬರಬೇಕು.

ಶ್ರೀ ಬಿ.ಬಿ.ಶಿವಕುಮಾರ್: ಸರಕಾರವೇ ಕನಿಷ್ಠ ಬೆಲೆ ಇಷ್ಟು ಎಂದು ಕೊಂಡುಕೊಳ್ಳುವ ವ್ಯವಸ್ಥೆ ಮಾಡಿದಾಗ ಮಾರುಕಟ್ಟೆಯಲ್ಲಿ ಬೆಲೆಗಳು ಏರುತ್ತವೆ.

MR. SPEAKER: They have to handle them. The merchants think it is a joke. They can explit ಎಂದು ತಿಳಿದಿದ್ದಾರೆ. ಅವರು ಹೇಳುವ ಪ್ರಕಾರ 50 ಕೆ.ಜಿ ಮೂಟೆಗೆ 30 ರೂಪಾಯಿ ಎಂದು ಹೇಳಿದರೆ ಇನ್ನು ಇದಕ್ಕಿಂತ ಲೋಯೆಸ್ಟ್ ಪ್ರೊಫೆಷನ್ ಇನ್ನು ಯಾವುದೂ ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಇಂಧನ ಸಚಿವರು ಈಗ ಒಂದು ಸ್ಟೇಟ್‌ಮೆಂಟನ್ನು ಮಾಡಲಿ. We have to give them time for discussion.

(7) ಮಂತ್ರಿಗಳ ಹೇಳಿಕೆ

ವಿದ್ಯುತ್ ದರದ ಪಟ್ಟಿಗೆ ಸಂಬಂಧಿಸಿದಂತೆ ಕುರಿತು

ಶ್ರೀ ಶರಣಬಸಪ್ಪ ದರ್ಶನಾಪುರ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ದಿನಾಂಕ 1-7-97ರಿಂದ ಜಾರಿಗೆ ಬರುವಂತೆ ವಿದ್ಯುತ್ ದರವನ್ನು ಪರಿಷ್ಕರಿಸಿತ್ತು. ಈ ಏರಿಕೆಯಿಂದ ಕೆಲವು ರಿಯಾಯ್ತಿಗಳನ್ನು ಗ್ರಾಹಕರಿಗೆ ಅದರಲ್ಲೂ ದುರ್ಬಲ ವರ್ಗಕ್ಕೆ ಹಾಗೂ ಗೃಹ ಬಳಕೆದಾರರಿಗೆ ನೀಡಿ ಅನುಕೂಲ ಮಾಡಿ ಕೊಡುವಂತೆ ಅನೇಕ ಗೌರವಾನ್ವಿತ ಸದಸ್ಯರುಗಳು ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಅದರಂತೆಯೇ ಅನೇಕ ಕೈಗಾರಿಕಾ, ಸಂಘ ಸಂಸ್ಥೆಗಳೂ ಸಹ ಈ